ಸಿ.ಸಿ. ನಂ. 3599-2012
ಸಿಡಬ್ಲೂ -122 ಪಿಡಬ್ಲೂ-23

ಸಾಕ್ಷಿಯನ್ನು ದಿನಾಂಕಃ 11-07-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಂದುವರಿದ ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ಸಾಕ್ಷಿಯು ಅವರ ಮತ್ತು ಆರೋಪಿಯ ಮಧ್ಯ ನಡೆದ ವ್ಯವಹಾರದ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.43, ಸಾಕ್ಷಿಯ ಸಹಿಯನ್ನು ನಿಪಿ.43ಎ ಎಂದು ಗುರುತಿಸಲಾಯಿತು. ದಿ. 28-04-2024 ರ ಹಣ ಸಂದಾಯ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 44 ಎಂದು ಗುರುತಿಸಲಾಯಿತು.

ಪಾಟೀ ಸವಾಲು 1 ನೇ ಆರೋಪಿಯ ಪರ ವಕೀಲರಿಂದಃ

ಸೈಟು ಮಾರಾಟಕ್ಕಿದೆ ಎಂದು ಸ್ನೇಹಿತರ ಮೂಲಕ ಗೊತ್ತಾಯಿತು. ನಂತರ ನಾನು ಜಾಗಕ್ಕೆ ಹೋಗಿರುತ್ತೇನೆ. ಅಲ್ಲಿ ಖಾಲಿ ಜಮೀನು ಇತ್ತು. ಪ್ಲಾಟ್ ನಂಬರ್ ಬರೆದಿದ್ದರು. ಭೂಮಿ ಮಾತ್ರ ತೋರಿಸಿದ್ದರು, ಅಪ್ರೂವಲ್ ನ್ನು ತೋರಿಸಿರಲಿಲ್ಲ. ನಿಪಿ. 44 ರಲ್ಲಿ 1 ನೇ ಆರೋಪಿಯ ಸಹಿ ಇಲ್ಲಾ ಎಂದರೆ ಸರಿಯಲ್ಲ. ಕ್ರಯ ಪತ್ರ ಬರೆದು ಕೊಡಿ ಎಂದು ನಾನು ನೋಟೀಸನ್ನು ಕೊಟ್ಟಿಲ್ಲ. ನಾನು ಕರಾರಿನ ಮೇಲೆ ಸಿವಿಲ್ ಕೇಸನ್ನು ಹಾಕಿಲ್ಲ.

2007-08 ರಲ್ಲಿ ಸರ್ಕಾರ ಬೆಂಗಳೂರಿನ ಸುತ್ತಮುತ್ತ ಎನ್ ಎ ಸ್ಟಾಪ್ ಮಾಡಿತ್ತು ಎಂದರೆ ಗೊತ್ತಿಲ್ಲ. ಸಾಕ್ಷಿಯು ನನಗೆ ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸರ್ಕಾರದ ಆದೇಶದಿಂದ ಲೇಔಟ್ ಪ್ರೊಸೆಸ್ಸ್ ಸ್ಟಾಪ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ದೂರಿನ ಮೇಲೆ ಸಿಸಿಬಿಯವರು ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು ಆರೋಪಿತರು ಲೇಔಟ್ ಮಾಡಲು ಆಗಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಸೈಟ್ ಕೊಡದೇ ಇರಲು ನನ್ನ ನಿರ್ಲಕ್ಷ್ಯವೇ ಕಾರಣ ಎಂದರೆ ಸರಿಯಲ್ಲ. ಆರೋಪಿಯ ಕಡೆಯಿಂದ ನನಗೆ ಯಾವುದೇ ಮೋಸ ಆಗಿಲ್ಲ ಎಂದರೆ ಸರಿಯಲ್ಲ.

2 ನೇ ಆರೋಪಿಯ ಪರ ವಕೀಲರು 1 ನೇ ಆರೋಪಿ ಪರ ವಕಿಲೇರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ